(iii) re :—Starting of Kannada Daily Samyukta Karnataka Bangalore Edition

SRI C.M. IBRAHIM.—Sir, I beg to make the following statement.

I have assured the House that I will make a statement on the possibility of re-starting the Bangalore edition of Samyukta Karnataka daily. I have examined this matter thoroughly, and I have obtained legal opinion in the matter.

A civil Suit in O.S. No. 4/77 is pending in the Court of the District Judge, Dharwar and the trial of the suit is schedule to commence on 28th June 1980. In regard to the appointment of a receiver, the matter is pending in Miscel aneous First Appeal No. 263/1979 in the High Court. It appears recently an order for appointment of a receiver in respect of the moveable properties of the Loka Shikshana Trust has also been made by the Court.

In the circumstances, it is found that the Government cannot independently take any action unilaterally, but it can initiate steps in the Court and request the Charity Commissioner who is a party to the suit to explore the possibilities of restarting the Bangalore edition after apprising the Court of the position and obtaining the orders of the Court. Even this could only be an interim measure subject to the final result of the suit.

ಶ್ರೀ ಎ. ಲಕ್ಷ್ಮೀಸಾಗರ್.— ಮಾನ್ಯ ಉಪಾಧ್ಯಕ್ಷರೆ ಯವರೇ, ಮಾನ್ಯ ಮಂತ್ರಿಗಳವರ ಗಮನಕ್ಕೆ ನಾವು ಈ ವರ್ಷದ ಮಾರ್ಚಿ ತಿಂಗಳಿನಲ್ಲಿಯೇ ಈ ಪತ್ರಿಕೆಯನ್ನು ಪುನಃ ಆರಂಭಿಸುವ ಬಗ್ಗೆ, ಏನು ಕ್ರಮ ತೆಗೆದುಕೊಳ್ಳಬಹುದೆನ್ನುವ ಬಗ್ಗೆ ಕೆಲವಾರು ವಿಚಾರಗಳನ್ನು ತಿಳಿಸಿದ್ದೆವು. ಇವತ್ತಿನ ದಿವಸ ಮಾನ್ಯ ಮಂತ್ರಿಗಳವರ ಹೇಳಿಕೆಯಲ್ಲಿ ಏನು ಹೇಳಿದ್ದಾರೆಂದರೆ, ಮಾರ್ಚಿ ಇಂದ ಇಲ್ಲಿಯವರೆಗೆ ಅಲ್ಲಿಯ ಪರಿಸ್ಥಿತಿ ಉತ್ತಮಗೊಂಡಿಲ್ಲ. ಆದು ಕೋರ್ಟಿನಲ್ಲಿದೆ. ದಾವಾ ಇದೆ.ಹೈಕೋರ್ಟಿನಲ್ಲಿ ಮೊಕದ್ದಮೆ ನಡೆಯುತ್ತಿದೆ ಆ ಮೇಲೆ ಅಲ್ಲಿಗೆ ಒಬ್ಬ ರಿಸೀವರನ್ನು ಕೋರ್ಟಿಗೆ ನೇಮಕ ಮಾಡಬೇಕಾಯಿತು, ಈ ತರಹ ತಕರಾರು ತಗಾದೆಯುಳ್ಳ ಹೇಳಿಕೆಯನ್ನು ಮಾತ್ರ ನಮ್ಮ ಈ ಸದನದ ಮುಂದಿಟ್ಟಿದ್ದಾರೆ. ಹೋದ ಸಾರಿಯೇ ನಾವು ಸರ್ಕಾರದ ಮುಂದೆ ಮನವಿ ಸಲ್ಲಿಸಿದ್ದರ ಬಗ್ಗೆ, ಅವರು ಯೋಚನೆ ಮಾಡಿಲ್ಲವೆಂದು ಅನ್ನಿಸುತ್ತದೆ. ಈ ಪತ್ರಿಕೆಗೆ ಸಂಬಂಧಪಟ್ಟ ಕೆಲವು ಮೊಕದ್ದಮೆಗಳು ಕೋರ್ಟಿನಲ್ಲಿ ನಡೆಯುತ್ತಿವೆ. ಆದರೆ ಎಲ್ಲರಿಗೂ ಬೇಸರ ವಾಗಿ ಯಾವುದಾದರೂ ಒಂದು ಇತ್ಯರ್ಥಕ್ಕೆ ಬರಲು ಎಲ್ಲರೂ ಸಿದ್ಧರಾಗಿದ್ದಾರೆ. ಅವರೆಲ್ಲರ ಮನಸ್ಸಿನಲ್ಲೂ ಆದಷ್ಟು ಬೇಗ ಬೆಂಗಳೂರಿನಲ್ಲಿ ಪತ್ರಿಕೆಯನ್ನು ಪುನರಾರಂಭ ಮಾಡಬೇಕೆಂಬ ಬಯಕೆ ತೀವ್ರವಾಗಿದೆ. ಆದ್ದರಿಂದ, ಅವರೆಲ್ಲರನ್ನು ಕರೆಸಿ ಮಾತನಾಡಿ ಮೊಕದ್ದಮೆಗಳು ತೀರ್ಮಾನವಾಗುವುದು ನಿರಾಕ್ಷೇಪವಾದರೂ ಪತ್ರಿಕೆಯನ್ನು ಪುನರಾರಂಭಿಸುವ ಕಡೆ ಸರ್ಕಾರ ತೀವ್ರ ಗಮನ ಕೊಡಬೇಕೆಂದು ಒತ್ತಾಯ ಮಾಡುತ್ತೇನೆ ಮಾನ್ಯ ಮಂತ್ರಿಗಳು ಈಗತಾನೇ ನೀಡಿದ ಹೇಳಿಕೆಯನ್ನು ನೋಡಿದರೆ ಕಳೆದ ೩-೪ ತಿಂಗಳುಗಳಿಂದಲೂ ಪರಿಸ್ಥಿತಿ ಹಾಗೆ ಇದೆ ಎಂಬುದು ಸ್ಪಷ್ಟವಾಗುತ್ತದೆ. ಇದುವರೆಗೆ ಏನು ಮಾಡಿದರು ಎಂಬುದು ನನಗಂತು ಗೊತ್ತಿಲ್ಲ. ತಮ್ಮ ಹೇಳಿಕೆಯಲ್ಲಿ 'ಥರೋಲಿ ಎಕ್ಸಾಮಿನ್ಡ್' ಎಂದು ಹೇಳಿದ್ದಾರೆ. ಮತ್ತು ಸರ್ಕಾರ ಇದರಲ್ಲಿ ಪ್ರವೇಶ ಮಾಡುವುದಕ್ಕೆ ಆಗುವುದಿಲ್ಲವೆಂದು ಕೂಡ ಹೇಳಿದ್ದಾರೆ. ಇದನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಸರ್ಕಾರ ಒಪ್ಪಿಕೊಳ್ಳುವುದಕ್ಕಾಗುವುದಿಲ್ಲವೆಂದು ನಾನು ಹಿಂದೆಯೇ ಹೇಳಿದ್ದೆ. ಸರ್ಕಾರ ಏನು ಮಾಡಬಹುದೆಂಬುದನ್ನು ಸಹ ನಾನು ಆವತ್ತೇ ಸೂಚಿಸಿದ್ದೆ, ಈ ಸಂದರ್ಭದಲ್ಲಿ, ನನ್ನ ಮನಸ್ಸಿಗೆ ಬಹಳ ನೋವಾಗುತ್ತದೆಂದು ಹೇಳಬೇಕಾಗಿದೆ. ಪತ್ರಿಕೆಯನ್ನು ಪುನರಾರಂಭ ಮಾಡುವುದಕ್ಕೆ ನೀವು ನಿಮ್ಮ ಶಕ್ತಿಯನ್ನು ಸಾಕಷ್ಟು ಉಪಯೋಗಿಸಿಲ್ಲವೆಂದು ಹೇಳಬೇಕಾಗಿದೆ. ಇದಕ್ಕೆ ಸಂಬಂಧಪಟ್ಟ ಎಲ್ಲರನ್ನು ಸೇರಿಸಿ ಚಾರಿಟಿ

ಕಮೀಷನರ್ ಮುಂದೆ ಅರ್ಜಿ ಹಾಕಿಸಿ ಬೇಗ ಪತ್ರಿಕೆಯನ್ನು ನಡೆಸುವುದಕ್ಕೆ ಪ್ರಯತ್ನ ಮಾಡಿ ಎಂದು ಹೇಳಿದ್ದೆ. ಆದರೆ ಅದರ ಬಗ್ಗೆ ಈಲಾಗಾಯ್ತು ಏನೂ ಪ್ರಯತ್ನ ಮಾಡಿಲ್ಲವೆಂದು ಕಂಡುಬರುತ್ತದೆ. ಇವತ್ತಿನ ದಿವಸ, ನಾವು ಏಕೆ ಸರ್ಕಾರಕ್ಕೆ ಇಷ್ಟು ಒತ್ತಾಯ ಮಾಡುತ್ತಿದ್ದೇವೆಂದರೆ, ಪತ್ರಿಕೆ ನಿಂತಿರುವುದರಿಂದ ಅಲ್ಲಿ ಕೆಲಸ ಮಾಡುತ್ತಿದ್ದ ೩೦೦ ಜನ ಕಾರ್ಮಿಕರಿಗೆ ದಿಕ್ಕು ಕಾಣದಾಗಿ ದೇವರೇ ಗತಿ ಎಂಬ ಪರಿಸ್ಥಿತಿ ಬಂದಿದೆಯಲ್ಲದೆ ಒಬ್ಬ ಕಾರ್ಮಿಕ ಕನ್ನಂಬಾಡಿ ಕಟ್ಟೆಯಲ್ಲಿ ಬಿದ್ದು ಸತ್ತೇ ಹೋದ. ಅವರಿಗೆ ಏನಾದರೂ ಒಂದು ವ್ಯವಸ್ಥೆ ಮಾಡಿ ಎಂದರೆ ಹೇಳಿದ್ದನ್ನೇ ಪುನಃ ಹೇಳಿದ್ದಾರೆ. ನಾನು ಅವರ ಪೈಕಿ ಕೆಲವರ ಹತ್ತಿರ ಮಾತನಾಡಿದ್ದೇನೆ. ಅವರೆಲ್ಲರೂ ಪತ್ರಿಕೆಯನ್ನು ನಡೆಸುವುದಕ್ಕೆ ಸಿದ್ಧರಿದ್ದಾರೆ. ಇಂಥ ಸಂದರ್ಭದಲ್ಲಿ, ಈ ಒಂದು ಅವಕಾಶವನ್ನು ಉಪಯೋಗಿಸಿಕೊಂಡು ಅವರೆಲ್ಲರನ್ನೂ ಸೇರಿಸಿ ಚಾರಿಟಿ ಕಮೀಷನರ್ ಮುಂದೆ ಅರ್ಜಿ ಹಾಕಿಸಿ ಆದಷ್ಟು ಬೇಗ ಪತ್ರಿಕೆಯನ್ನು ಪುನರಾರಂಭ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ಕೋರ್ಟಿನಲ್ಲಿರುವ ಮೊಕದ್ದಮೆಗಳು ನಿಧಾನವಾಗಿ ತೀರ್ಮಾನವಾಗಲಿ. ಇದರ ಬಗ್ಗೆ ಏನು ವಿವರಣೆ ಕೊಡುತ್ತೀರಿ?

† ಶ್ರೀ ಬಿ. ಬಸವಲಿಂಗಪ್ಪ. — ನಾನು ಕಳೆದ ಸಾರಿ ಸಂಯುಕ್ತ ಕರ್ನಾಟಕ ದಿನಪತ್ರಿಕೆಯನ್ನು ಪ್ರಾರಂಭಿಸುವ ಬಗ್ಗೆ ಬಹಳ ಕಠಿಣವಾದ ಭಾಷೆಯಲ್ಲಿ ಹೇಳಿದ್ದೆ. ಇವತ್ತಿನ ದಿವಸ ಮಾನ್ಯ ಮಂತ್ರಿಗಳು ಏನು ಹೇಳಿಕೆ ಕೊಟ್ಟಿದ್ದಾರೆ ಇದೇ ಪರಿಸ್ಥಿತಿ ಹಿಂದೆಯೂ ಇತ್ತು. ಕೇಸ್ ಕೋರ್ಟಿನಲ್ಲಿದೆ ಎಂಬುದು ಮಾರ್ಚ್ ತಿಂಗಳಿಂದಲೂ ಗೊತ್ತು, ಮತ್ತು ಇವತ್ತಿಗೂ ಕೋರ್ಟಿನಲ್ಲಿದೆ ಎಂಬುದು ಗೊತ್ತು. ನೀವೂ ಕೂಡ ಅದನ್ನೇ ಹೇಳುತ್ತಿದ್ದೀರಿ. ನೀವು ಅವತ್ತಿನ ದಿವಸ ಪತ್ರಿಕೆಯನ್ನು ಹೊರಡಿಸುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಹೇಳಿದಿರಿ. ಆಗ ಮಾನ್ಯ ಗುಂಡೂರಾಯರು ಇದ್ದರು. ಆಗ ನಾನು ಮಾನ್ಯ ಇಬ್ರಾಹಿಂರವರ ಕೈಯ್ಯಲ್ಲಿ ಅದು ಆಗುವುದಿಲ್ಲ, ನೀವೇ ಮಾಡಿ ಎಂದು ಮಾನ್ಯ ಗುಂಡೂರಾಯರಿಗೆ ಹೇಳಿದೆ. ಅಂತೆಯೇ ಇವತ್ತಿಗೂ ನಿಮ್ಮ ಕೈಯಲ್ಲಿ ಆಗಿಲ್ಲ. ಆದ್ದರಿಂದ ಅವತ್ತೇ ನನ್ನ ಕೈಯ್ಯಲ್ಲಿ ಆಗುವುದಿಲ್ಲವೆಂದು ಸ್ಪಷ್ಟವಾಗಿ ಹೇಳಿದ್ದರೆ ಚೆನ್ನಾಗಿರುತ್ತಿತ್ತು. ಈಗಲಾದರೂ ಆಗುತ್ತದೆಯೋ ಇಲ್ಲವೇ ಎಂಬುದನ್ನು ಸ್ಪಷ್ಟವಾಗಿ ಹೇಳಿ. ಆಗುವುದಿಲ್ಲವೆಂದು ಹೇಳಿದರೆ ಬಹಳ ಸಂತೋಷವಾಗುತ್ತದೆ. ಏಕೆಂದರೆ, ಸುಮ್ಮನೆ ಮಾಡುತ್ತೇನೆಂದು ಹೇಳಿ ಮಾಡದಿದ್ದರೆ ಬೇರವಾಗುತ್ತದೆ. ತಮ್ಮ ಹೇಳಿಕೆಯ ಕೊನೇ ಪ್ಯಾರಾದಲ್ಲಿ ಕೇಸ್ ಇತ್ಯರ್ಥವಾದ ಮೇಲೆ ಮಾಡುತ್ತೇವೆಂದು ಹೇಳಿದ್ದೀರಿ. ಆ ಕೇಸು ಇತ್ಯರ್ಥವಾಗುವ ಹಾಗೆ ಇಲ್ಲ, ಮತ್ತು ನೀವು ಪ್ರಾರಂಭ ಮಾಡುವ ಹಾಗೆಯೂ ಇಲ್ಲ. ಇದು ಒಂದು ನಿರಾಶೆಯನ್ನು ಹುಟ್ಟಿಸುವ ಹೇಳಿಕೆ ಎಂದರೆ ತಪ್ಪಾಗುವುದಿಲ್ಲ. ಮತ್ತು ಅವರಿಗೆ ಮನಸ್ಸು ಇಲ್ಲದೆ ನೀಡಿರುವ ಹೇಳಿಕೆ ಎಂದೂ ಹೇಳಬಹುದು. ಆದ್ದರಿಂದ, ಈ ಬಗ್ಗೆ ಖಚಿತವಾಗಿ ಆಗುತ್ತದೆಯೋ ಅಥವಾ ಇಲ್ಲವೇ ಎಂಬುದನ್ನು ದಯಮಾಡಿ ಹೇಳಬೇಕೆಂದು ಒತ್ತಾಯ ಮಾಡುತ್ತೇನೆ.

† ಶ್ರೀ ಪಿ. ರಾಮದೇವ್ — ಈಗ ಮಾನ್ಯ ಮಂತ್ರಿಗಳು ಏನು ಹೇಳಿಕೆ ನೀಡಿದರು ಅದು ಬಹಳ ಮಃಖಕರ ಎಂದು ಅಂದುಕೊಂಡಿದ್ದೇನೆ. ಇದೇ ಸದನದಲ್ಲಿ ಇದೇ ಮಂತ್ರಿಗಳು ಕಳೆದ ೩–೪ ತಿಂಗಳ ಹಿಂದೆ ಬಹಳ ಉತ್ಸಾಹದಿಂದ ಈ ಸಮಸ್ಯೆಯನ್ನು ಪರಿಹಾರ ಮಾಡುತ್ತೇನೆಂದು ಭರವಸೆ ಕೊಟ್ಟರು. ನನ್ನ ಕಾಲದಲ್ಲಿ ಕಾರ್ಮಿಕ ವರ್ಗದಲ್ಲಿ ಏನೇನು ತೊಂದರೆಗಳು ಬಂದರೂ ಅವನ್ನೆಲ್ಲ ಪರಿಹರಿಸುತ್ತೇನೆಂದು ಪತ್ರಿಕಾ ಹೇಳಿಕೆ ನೀಡಿದರು. ಮೈಕೋ ಫ್ಯಾಕ್ಟರಿ ಲಾಕ್‌ಔಟ್ ಆದಾಗ ಕಾರ್ಮಿಕರ ಪರವಾಗಿ ಮ್ಯಾನೇಜ್‌ಮೆಂಟ್ ನವರನ್ನು ಕರೆಸಿ ಯಾವ ರೀತಿ ಸಮಸ್ಯೆಯನ್ನು ಬಗೆಹರಿಸಿದಿರಿ ಆ ರೀತಿ ಏತಕ್ಕೆ ಇಲ್ಲಿ ಮಾಡುವುದಕ್ಕಾಗುವುದಿಲ್ಲವೆಂದು ಕೇಳುತ್ತೇನೆ. ಹುಬ್ಬಳ್ಳಿಯಲ್ಲಿ ನಡೆಸಿ ಇಲ್ಲಿ ಮುಚ್ಚುವುದು ಎಂದರೆ ಏನು ಅರ್ಥ? ಇದನ್ನು ತೀವ್ರವಾಗಿ ಗಮನಿಸಬೇಕಾಗುತ್ತದೆ. ಸಂಯುಕ್ತ ಕರ್ನಾಟಕದ ಮಾಲೀಕರಾದ ಶ್ರೀಮಾನ್ ಹೆಚ್. ಆರ್. ಬಸವರಾಜು ಅವರನ್ನು ಕರೆಸಿ ವಾರ್ನಿಂಗ್ ಕೊಡುವುದಕ್ಕೆ ಸರ್ಕಾರಕ್ಕೆ ಕಷ್ಟವಾಗಬಹುದು. ಏಕೆಂದರೆ, ಸರ್ಕಾರ ಅವರಿಂದ ಸಾಕಷ್ಟು ಪ್ರಯೋಜನವನ್ನು ಪಡೆದಿದೆ. ಅಲ್ಲಿ ಕೆಲಸ ಮಾಡುತ್ತಿದ್ದ ಒಬ್ಬರು ಕಾರ್ಮಿಕರು ಸತ್ತಿದ್ದಾರೆ, ಅನೇಕ ಹೆಣ್ಣು ಮಕ್ಕಳು ದಾರಿಗೆ ಬಂದಿದ್ದಾರೆ.

ಅಧ್ಯಕ್ಷರು.— ತಿರುಗಿ ಅದನ್ನೇ ಹೇಳುತ್ತಿದ್ದೀರಿ.

ಶ್ರೀ ಟಿ. ರಾಮದೇವ್.— ಸರ್ಕಾರ ಸ್ವಲ್ಪ ಫಟ್ಸ್ ತೆಗೆದುಕೊಳ್ಳಬೇಕು. ಆ ಮಾಲೀಕರನ್ನು ಕರೆಸಿ ಅವರ ಮೇಲೆ ಪ್ರಾಸಿಕ್ಯೂಷನ್ ಹೂಡಬೇಕು, ಅವರು ಪ್ರಾವಿಡೆಂಟ್ ಫಂಡ್ಸ್, ಇನ್‌ಶೂರೆನ್ಸ್ ಎಲ್ಲವನ್ನು ನುಂಗಿ ಹಾಕಿದ್ದಾರೆ. ಆದ್ದರಿಂದ, ದಯವಿಟ್ಟು ಇನ್ನಾದರೂ ಸೀರಿಯಸ್ ಆಗಿ ತೆಗೆದುಕೊಳ್ಳಿ ಎಂದು ಹೇಳುತ್ತೇನೆ.

ಶ್ರೀ ಎಸ್ ಆರ್. ಬೊಮ್ಮಾಯಿ.— ಈ ಸಮಸ್ಯೆಯಲ್ಲಿ ಅನೇಕ ಕಾನೂನಿನ ತೊಡಕುಗಳಿವೆ ಎಂದು ಹಿಂದೆ ಈ ವಿಚಾರವನ್ನು ಈ ಸಭೆಯಲ್ಲಿ ಪ್ರಸ್ತಾಪ ಮಾಡಿದಾಗಲೇ ಹೇಳಿದ್ದೆ. ಆದರೆ ಯುವ ಮಂತ್ರಿಗಳು ಬಹಳ ಉತ್ಸಾಹದಿಂದ ಆ ಸಮಸ್ಯೆಯನ್ನು ಪರಿಹಾರ ಮಾಡಿ ಪತ್ರಿಕೆ ಪುಣಃ ಹೊಂಡುವಂತೆ ಮಾಡುತ್ತೇನೆಂದು ಭರವಸೆ ಕೊಟ್ಟರು. ಆ ಒಂದು ಉತ್ಸಾಹವನ್ನು ನೋಡಿ ನಾನು ಒಂದು ಸಲಹೆಯನ್ನು ಕೊಟ್ಟೆ. ಅದೇನೆಂದರೆ, ಇಲ್ಲಿ ಕಾನೂನಿನ ತೊಡಕು ಸಂಪೂರ್ಣವಾಗಿ ಕೋರ್ಟಿನಲ್ಲಿ ನಿರ್ಣಯವಾಗಬೇಕಾಗುವುದು ಕಷ್ಟ ಇದೆ. ಇದು ಒಂದು ಕಂಪನಿಗೆ ಸಂಬಂಧಪಟ್ಟ ವಿಷಯ. ಸರ್ಕಾರ ಕಂಪೆನಿಗೆ ಹಣ ಕೊಡುವುದಕ್ಕೆ ಸಾಲದ ವ್ಯವಸ್ಥೆ ಮಾಡುವುದಕ್ಕೆ ಕಾನೂನಿನ ತೊಡಕಿರುವುದರಿಂದ ಅವಶ್ಯಿಲ್ಲದನ್ನು ಕರೆಯಿರಿ (ಸಭೆ ಕರೆಯಿರಿ). ನಾನೂ ಬರುತ್ತೇನೆಂದು ಹೇಳಿದೆ. ನನಗೆ ಮೊದಲಿನಿಂದ ಇದರ ಬಗ್ಗೆ ಆಸಕ್ತಿ ಇದೆ ಎಂದೂ ಗೊತ್ತು. ವಿಚಾರ ಕೂಡ ಗೊತ್ತಿದೆ ಎಂದು ಹೇಳಿದೆ ಆದರೂ ಕೂಡ ಮಾನ್ಯ ಮಂತ್ರಿಗಳು ಆ ಸಭೆ ಗದುನ ಕೊಡಲಿಲ್ಲ. ಆನಂತರ ದಿವಸ ಈ ಸಭೆಗೆ ಕೊಟ್ಟಿದ್ದಂತಹ ಭರವಸೆಯನ್ನು ಇವತ್ತು ಗಾಳಿಗೆ ತೂರಿದ್ದಾರೆ. ಸರ್ಕಾರ ಏನು ಮಾಡುವುದಕ್ಕೂ ಸಾಧ್ಯವಿಲ್ಲ ಎಂಬ ಮಾತನ್ನು ಇವತ್ತು ಹೇಳಿದ್ದಾರೆ. ಈ ರೀತಿ ಹೇಳುವುದಕ್ಕೆ ಮೊದಲು ಅವರು ಏನೇನು ಪ್ರಯತ್ನಗಳನ್ನು ಮಾಡಿದರೆಂಬುದು ನನಗೆ ಗೊತ್ತಿಲ್ಲ. ಪತ್ರಿಕಾ ರಂಗದಲ್ಲಿ ಕೆಲಸ ಮಾಡಿ ತಕ್ಕ ಪ್ರತಿನಿಧಿಗಳನ್ನು ಸಂಸ್ಥೆಗೆ ಸಂಬಂಧಪಟ್ಟವರನ್ನು ಕರೆದು ಏನಾದರೂ ಒಂದು ಮಾರ್ಗವನ್ನು ಹುಡುಕದಿದ್ದರೆ ಆದು ತಪ್ಪಾಗುತ್ತದೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಸಂದರ್ಭದಲ್ಲಿ ಭರವಸೆ ಕೊಟ್ಟು, ನಂತರ ಆಗುವುದಿಲ್ಲವೆಂಬುದಕ್ಕೆ ಇಂಗ್ಲೀಷಿನಲ್ಲಿ ನಮ್ಮ ಬಗ್ಗೆ ಹೇಳಿರುವ ಒಂದು ಮಾತು ಈ ರೀತಿ ಇದೆ. "We are know for making easy promises than giving lame excuses" ಏನಾದರೂ ಕೇಳಿದ ಕೂಡಲೇ ಮಾಡುತ್ತೇವೆಂದು ಹೇಳುವುದು, ಕೊಡಲೆಗೆ ಆಗದಿದ್ದರೆ ಏನಾದರೊಂದು ನೆಪ ಹೂಡುವುದು, ಇದು ಖಂಡಿತ ಸರಿಯಲ್ಲ. ಸರ್ಕಾರ ಆವರಿಗೆ ನಾವೂ ಸಹಾಯ ಮಾಡುವ ವಿಚಾರ ಇದ್ದರೆ ಸಂಬಂಧಪಟ್ಟವರ ಸಭೆ ಕರೆದು ವಿಚಾರ ಮಾಡಬೇಕಾಗಿತ್ತು. ಶ್ರೀ ಟಿ. ವಿ. ಫಟ್ ಎಂಬ ಸಂಯುಕ್ತ ಕರ್ನಾಟಕದ ಸಂಪಾದಕರನ್ನು ಮನೆಗೆ ಕಳುಹಿಸಿದ್ದಾರಲ್ಲವೆ ಸಧ್ಯದಲ್ಲೇ ಹುಬ್ಬಳ್ಳಿಯ ಪತ್ರಿಕೆಯನ್ನು ರದ್ದು ಮಾಡುವ ಪ್ರಯತ್ನದಲ್ಲಿದ್ದಾರೆ. ಅಲ್ಲಿ ಸುಮಾರು ೫೦ ಲಕ್ಷ ರೂಪಾಯಿನಷ್ಟು ಸಾರ್ವಜನಿಕರ ಹಣ ಡಿಪಾಸಿಟ್ ಇದೆ. ಅದು ಸಾರ್ವಜನಿಕ ಸಂಸ್ಥೆಯಾಗಿದೆ ಮಾತಿಗೇ ವ್ಯವಹಾರವಾಗಿದ್ದರೆ ಆವಿಚಾರ ಬೇರೆಯಾಗಿರುತ್ತಿತ್ತು. ಅನೇಕ ಖಾಸಗೀ ಕಂಪನಿಗಳಿರುತ್ತವೆ, ಕೆಲವೊಮ್ಮೆ ದಿವಾಳಿಯಾಗುತ್ತವೆ, ಅದಕ್ಕೆಲ್ಲ ಸರ್ಕಾರ ಹೊಣೆಯಲ್ಲ. ಆದರೆ ಇದು ಸಾರ್ವಜನಿಕ ಸಂಸ್ಥೆ, ೫೦ ಲಕ್ಷದಷ್ಟು ಹಣ ಡಿಪಾಸಿಟ್ ಇದೆ, ಜೊತೆಗೆ ಕೊಟ್ಯಾಂತರ ರೂಪಾಯಿ ಬೆಲೆ ಬಾಳುವ ಆಸ್ತಿ ಇದೆ ಆದರಲ್ಲಿ ಸರ್ಕಾರ ಕಾನೂನು ಪ್ರಕಾರ ಕೈಹಾಕಿ ಎಲ್ಲ ಆಸ್ತಿಯನ್ನು ತನ್ನ ವಶಕ್ಕೆ ತೆಗೆದುಕೊಳ್ಳಬಹುದು. ಈ ಬಗ್ಗೆ ವಿಚಾರ ಮಾಡಲು ಕಾನೂನು ಮಂತ್ರಿಗಳಿದ್ದಾರೆ, ವಿಚಾರ ಮಾಡಬಹುದು. ಆಲ್ಲಿ ಅನೇಕ ಜನ ಕೊಳ್ಳಿ ಹೊಡೆದಿದ್ದಾರೆ.

ಕೊಳ್ಳಿ ಹೊಡೆದವರ ಮೇಲೆ ಪ್ರಾಸಿಕ್ಯೂಟ್ ಮಾಡಬೇಕಾಗುತ್ತದೆ. ಅವರನ್ನು ಪ್ರಾಸಿಕ್ಯೂಟ್ ಮಾಡಿ ಅಸೆಟ್ಸ್ ರಿಕವರ್ ಮಾಡಬೇಕಾಗುತ್ತದೆ. ಆ ಟ್ರಸ್ಟನ್ನು ಉಳಿಸುವ ದೃಷ್ಟಿಯಿಂದ, ಆ ಪತ್ರಿಕೆಯಲ್ಲಿ ಕೆಲಸ ಮಾಡತಕ್ಕ ಕಾರ್ಮಿಕರ ಹಿತದೃಷ್ಟಿಯಿಂದ ತೀವ್ರವಾದ ಕ್ರಮ ತೆಗೆದುಕೊಳ್ಳುವುದಕ್ಕೆ ಸರ್ಕಾರ ಯೋಚನೆ ಮಾಡುತ್ತಿದೆಯೇ? ಟೈಮ್‌ಲಿಮಿಟ್ ತೊಂದರೆ ಇದೆ ಎಂಬುದು ಗೊತ್ತು, ಅದು ನಮಗೆ ಅರ್ಥವಾಗುತ್ತದೆ. ಆದರೆ ಇದನ್ನು ನಿರ್ವಾಣಿ ಮಾಡಲು ನೀವು ಆಲೋಚನೆ ಮಾಡಿದ್ದೀರಿ? ಒಂದು ವೇಳೆ ಮಾಡದಿದ್ದರೆ ಮಾಡುತ್ತೀರಾ? ಕೆಲವು ಸಲಹೆಗಳನ್ನು ನಾನು ಕೊಡಬೇಕೆಂದಿದ್ದೇನೆ. ಆದರೆ ಅದನ್ನು ಇಲ್ಲಿ ಹೇಳುವುದಕ್ಕೆ ನಾನು ತಯಾರಿಲ್ಲ. ನಿಮ್ಮ ಪ್ರತ್ಯೇಕವಾದ ಸಭೆ ಕರೆದು ಕೇಳಿದರೆ ನಾನು ಹೇಳುತ್ತಿದ್ದೆ How to over come these technical difficulties ಎಂಬುದನ್ನು ಹೇಳುತ್ತಿದ್ದೆ. I have got certain remedies which I would like to give to the Minister if he wants to act upon them.

ಶ್ರೀ ಹೆಚ್. ಗಂಗಾಧರನ್.—ಬೆಂಗಳೂರಿನಲ್ಲಿ ನಡೆಯುತ್ತಿದ್ದ ಸಂಯುಕ್ತ ಕರ್ನಾಟಕ ಪತ್ರಿಕಾಲಯದಲ್ಲಿ ಕೆಲಸ ಮಾಡುತ್ತಿದ್ದ ನೌಕರರು ಬೆಂಗಳೂರು ಸಂಯುಕ್ತ ಕರ್ನಾಟಕ ಪತ್ರಿಕೆಯ ನೌಕರರಲ್ಲ. ಲೋಕ ಶಿಕ್ಷಣ ಟ್ರಸ್ಟಿನ ನೌಕರರು. ಹುಬ್ಬಳ್ಳಿಯಲ್ಲಿ ಏನು ಲೋಕ ಶಿಕ್ಷಣ ಟ್ರಸ್ಟ್ ವತಿಯಿಂದ ಪತ್ರಿಕೆ ನಡೆಯುತ್ತಿದೆ ಆ ಟ್ರಸ್ಟಿನ ನೌಕರರು. ಹುಬ್ಬಳ್ಳಿಯಲ್ಲಿ ಸಂಚಿಕೆ ಪ್ರಕಟವಾಗುತ್ತದೆ. ಅಲ್ಲಿ ಕೆಲಸ ಮಾಡುತ್ತಿರುವ ನೌಕರರಿಗೆ ಸಂಬಳ ಸಾರಿಗೆ ಕೊಡುವುದಕ್ಕೆ ಅವಕಾಶವಿದೆ. ಆದರೆ ಅದೇ ಸಂಸ್ಥೆಯಲ್ಲಿ ಪ್ರಕಟವಾಗುತ್ತಿದ್ದ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದ ನೌಕರರಿಗೆ ಸಂಬಳ ಕೊಡುವುದಕ್ಕೆ ಅವಕಾಶವಿಲ್ಲ ಎಂದರೆ ಇದಕ್ಕೆ ಯಾವ ಕಾನೂನಿನ ಅಡ್ಡಿ ಇದೆ? ಬೆಂಗಳೂರಿನಲ್ಲಿ ಸಂಯುಕ್ತ ಕರ್ನಾಟಕ ಪತ್ರಿಕೆಯನ್ನು ಪ್ರಕಟ ಮಾಡುತ್ತಾರೋ ಇಲ್ಲವೋ ಅದು ನಮಗೆ ಬೇಡ. ಆದರೆ ಅಲ್ಲಿ ಕೆಲಸ ಮಾಡುತ್ತಿದ್ದ ನೌಕರರಿಗೆ ಹುಬ್ಬಳ್ಳಿಯಲ್ಲಿ ಕೊಡುವಂತೆ ಸಂಬಳ ಸಾರಿಗೆ ಕೊಡಬೇಕು. ಆ ವ್ಯವಸ್ಥೆಯನ್ನಾದರೂ ಕೂಡಲೇ ಮಾಡಬೇಕು. ಪತ್ರಿಕೆ ಯಾವಾಗ ಬೇಕಾದರೂ ಪ್ರಕಟವಾಗಲಿ, ಸಧ್ಯಕ್ಕೆ ಸಂಬಳ ಕೊಡುವ ವ್ಯವಸ್ಥೆಯನ್ನಾದರೂ ಮಾಡಿ.

ಶ್ರೀ ಮೈಕೇಲ್ ಬಿ. ಫರ್ನಾಂಡಿಸ್.—ಮಾನ್ಯ ಮಂತ್ರಿಗಳ ಹೇಳಿಕೆಯ ಸಾರಾಂಶ ಏನೆಂದರೆ–ಮಾಲೀಕರು ಕೋರ್ಟಿಗೆ ಹೋಗಿದ್ದಾರೆ, ಅಲ್ಲಿ ಅದು ತೀರ್ಮಾನವಾಗುವವರೆಗೆ ಸರ್ಕಾರದ ವತಿಯಿಂದ ಏನೂ ಮಾಡುವುದಕ್ಕಾಗುವುದಿಲ್ಲ ಎಂಬ ಅರ್ಥ ಬರುತ್ತದೆ. ಮಾಲೀಕರು ಅವರ ಹಕ್ಕುಭಾಧ್ಯತೆಗಳನ್ನು ರಕ್ಷಿಸಿಕೊಳ್ಳುವುದಕ್ಕೆ ಕೋರ್ಟಿಗೆ ಹೋಗಿದ್ದಾರೆ. ಅವರು ಒಂದು ದಿನದ ನೋಟೀಸನ್ನೂ ಕೊಡದೆ ರಾತ್ರಿ ನೋಟೀಸ್ ಕೊಟ್ಟು ೩೧೦ ಮಂದಿ ಕಾರ್ಮಿಕರನ್ನು ತೆಗೆದುಹಾಕಿದ್ದಾರೆ. ಇದು ಅವರು ಮಾಡಿರುವ ವಿಶೇಷ ತಪ್ಪು. ಈ ಅನ್ಯಾಯವನ್ನು ಮಾಡಿರುವ ಮಾಲೀಕರ ವಿರುದ್ಧ ಸರ್ಕಾರ ಯಾವ ಕ್ರಮವನ್ನು ತೆಗೆದುಕೊಂಡಿದೆ. ಮಾಲೀಕರು ಮಾಡಿರುವುದು ಅನ್ಯಾಯ, It is in violation of all rules of Industrial law. Without notice or any change in the condition of service, they have simply closed down the paper. ಅವರು ಯಾವೀತಿ ಧೈರ್ಯವಾಗಿ ಕೋರ್ಟಿಗೆ ಹೋಗಿದ್ದಾರೋ ಅದೇ ರೀತಿ ಸರ್ಕಾರದವರು ಧೈರ್ಯ ಮಾಡಿ ಕಾರ್ಮಿಕರ ರಕ್ಷಣೆಗೆ ಮನಸ್ಸು ಮಾಡಬೇಕು. ಈಗ ಯಾರು ಯಾರ ಪರವಾಗಿದ್ದಾರೆ ಎಂಬುದು ಅರ್ಥವಾಗುತ್ತಿಲ್ಲ. ಕೋರ್ಟಿಗೆ ಹೋಗಿರುವ ವಿಷಯ ತೀರ್ಮಾನವಾಗುವವರೆಗೆ ಕಾರ್ಮಿಕರು ಸಾಯಬೇಕೇ? ಇನ್ನೊಂದು ವಿಷಯ ವೆಂದರೆ ಸರ್ಕಾರದ ಸ್ವತ್ತೂ ಅಲ್ಲಿದೆ. Trust is there and there is property, it is not a sick industry. ಸರ್ಕಾರದವರು ಇದನ್ನು ಗಮನದಲ್ಲಿಟ್ಟುಕೊಂಡು ಯಾವುದಾದರೂ ರೀತಿಯಿಂದ ಪರಿಹಾರ ಕಂಡುಹಿಡಿಯಬೇಕು. ಸರ್ಕಾರದವರೇ ಅದನ್ನು ತೆಗೆದುಕೊಂಡು ತಾತ್ಕಾಲಿಕವಾಗಿಯಾದರೂ ಪತ್ರಿಕೆಯನ್ನು ನಡೆಸಲಿ ಈ ಬಗ್ಗೆ ಸರ್ಕಾರದವರು ಯಾವರೀತಿ ಮಾಡುತ್ತಾರೆ ಎಂಬ ಬಗ್ಗೆ ಮಾನ್ಯ ಮಂತ್ರಿಗಳು ಸ್ಪಷ್ಟವಾದ ಹೇಳಿಕೆಯನ್ನು ಕೊಡಬೇಕು.

(ಮಾನ್ಯ ಉಪಾಧ್ಯಕ್ಷೆಯವರು ಪೀಠವನ್ನಲಂಕರಿಸಿದರು)

ಶ್ರೀ ಬಾವೂರಾವ್ ದೇಶಪಾಂಡೆ.—ಸಂಯುಕ್ತ ಕರ್ನಾಟಕ ಪತ್ರಿಕೆಯನ್ನು ಲೋಕ ಶಿಕ್ಷಣ ಟ್ರಸ್ಟಿನವರು ನಡೆಸುತ್ತಿದ್ದರು. ನನಗೆ ಬಂದಿರುವ ಮಾಹಿತಿ ಪ್ರಕಾರ ಆ ಟ್ರಸ್ಟಿನ ಆಸ್ತಿ ಮತ್ತು ಪತ್ರಿಕೆಯನ್ನು ಬೇರೆ ಬೇರೆ ಮಾಡಿದ್ದಾರೆ. ಕೋರ್ಟಿನಲ್ಲಿ ವ್ಯವಹಾರ ನಡೆಯುತ್ತಿರುವಾಗ ಟ್ರಸ್ಟೀಸ್ ಆ ಆಸ್ತಿಯನ್ನು ಬೇರೆ ಬೇರೆ ರೀತಿಯಲ್ಲಿ ಉಪಯೋಗ ಮಾಡುತ್ತಿದ್ದಾರೆ. ಬೆಂಗಳೂರುನಗರದಲ್ಲಿ ನಡೆಯುತ್ತಿದ್ದ ಸಂಯುಕ್ತ ಕರ್ನಾಟಕ ಪತ್ರಿಕೆಯನ್ನು ಸರಿಯಾಗಿ ನಡೆಸದೆ ಪತ್ರಿಕಾಲಯವನ್ನು ಮುಚ್ಚಿದರು. ನಾಳೆ ದಿವಸ ಹುಬ್ಬಳ್ಳಿ ಪತ್ರಿಕಾಲಯವನ್ನೂ ಮುಚ್ಚಬಹುದು. ಆದರ ಆಸ್ತಿಯನ್ನು ಬೇರೆ ಬೇರೆ ರೀತಿಯಲ್ಲಿ ಅವ್ಯವಹಾರದ ಮೂಲಕ ಉಪಯೋಗ ಮಾಡುತ್ತಿದ್ದಾರೆ ಸಾರ್ವಜನಿಕರ ಹಣವೂ ಕಲ್ಲಿದೆ. ಅದು ಟ್ರಸ್ಟ್‌ದ್ದರಿಂದ ಅದನ್ನು ಆದ ಇಷ್ಟಬಂದಹಾಗೆ ಉಪಯೋಗ ಮಾಡುವಂತಿಲ್ಲ, ಆದ್ದರಿಂದ ಸರ್ಕಾರದವರು ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಏನಾದರೂ ವ್ಯವಸ್ಥೆ ಮಾಡುತ್ತಾರೆಯೇ ಎಂದು ಕೇಳುತ್ತಿದ್ದೇನೆ. ಆ ಟ್ರಸ್ಟಿನ ಮೂಲ ಉದ್ದೇಶ ಏನಿತ್ತು ಅದಕ್ಕೆ ವ್ಯತಿರಿಕ್ತವಾಗಿ ಈಗ ಕೆಲಸ ಕಾರ್ಯಗಳು ನಡೆಯುತ್ತಿವೆ. ಆದ್ದರಿಂದ ಸರ್ಕಾರದವರು ಕ್ರಮ ತೆಗೆದುಕೊಂಡು ಆಸ್ತಿಯನ್ನು ಮುಟ್ಟುಗೋಲು ಹಾಕಿ ಪತ್ರಿಕೆಯನ್ನು ನಡೆಸಿ ಕಾರ್ಮಿಕರಿಗೆ ಅನುಕೂಲ ಮಾಡಿಕೊಡುತ್ತಿರಾ? ಹೊಸ ಟ್ರಸ್ಟ್ ಮಾಡಿ ಬೇಕಾದರೂ ನಡೆಸಬಹುದು ಇಲ್ಲದೇ ಹೋದರೆ ಸಿಕ್ ಇಂಡಸ್ಟ್ರಿ ಎಂದು ಸರ್ಕಾರ ವರ್ಗೀಕರಿಸಿಕೊಳ್ಳಬೇಕು. ಸಾರ್ವಜನಿಕರ ಹಣ ಅಪವ್ಯಯವಾಗುವುದಕ್ಕೆ ಅವಕಾಶ ಕೊಡಬಾರದು. ಆದ್ದರಿಂದ ಸರ್ಕಾರ ಈ ಬಗ್ಗೆ ಸೂಕ್ತಕಾರ್ಯ

ಕ್ರಮ ತೆಗೆದುಕೊಂಡು ಕಾರ್ಮಿಕರಿಗೆ ಅನುಕೂಲ ಮಾಡಿಕೊಡುವ ಕಡೆ ಗಮನಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

† ಶ್ರೀ ಸಿ.ಎಂ. ಇಬ್ರಾಹಿಂ.—(ಕಾರ್ಮಿಕ ಮತ್ತು ಆಹಾರ ಮಂತ್ರಿಗಳು) ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರುಗಳು ಸಂಯುಕ್ತ ಕರ್ನಾಟಕ ಪತ್ರಿಕೆ ಬಗ್ಗೆ ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಮಾನ್ಯ ಬೊಮ್ಮಾಯಿಯವರು ಸ್ವಲ್ಪ ಮಟ್ಟಿಗೆ ಸರಿಯಾಗಿ ಸಮಸ್ಯೆಯನ್ನು ಅರ್ಥಮಾಡಿಕೊಂಡಿದ್ದಾರೆ, ಅವರೊಬ್ಬರಲ್ಲಿ ಬಿನ್ನಾಭಿಪ್ರಾಯ ಬಂದು ಕೋರ್ಟಿಗೆ ಹೋಗಿದ್ದಾರೆ. ಸರ್ಕಾರದವರು ಹೋಗಿಲ್ಲ. ಇದಕ್ಕೆ ಸಂಬಂಧಪಟ್ಟಂತೆ ಒಂದು ಕೇಸ್ ಧಾರವಾಡದಲ್ಲಿದೆ, ಇನ್ನೊಂದು ಬೆಂಗಳೂರಿನಲ್ಲಿದೆ.

ಶ್ರೀ ಎ. ಲಕ್ಷ್ಮಣಸಾಗರ್.—ಸರ್ಕಾರದವರು ಕೋರ್ಟಿಗೆ ಹೋಗಿದ್ದಾರೆ ಎಂದು ಯಾರೂ ಹೇಳಲಿಲ್ಲ.

ಶ್ರೀ ಸಿ.ಎಂ. ಇಬ್ರಾಹಿಂ.—ಯಾರೂ ಹೇಳದಿದ್ದರೂ ವಿವರ ಚೆನ್ನಾಗಿ ಗೊತ್ತಾಗಲಿಲ್ಲವೆಂದು ಹೇಳುತ್ತಿದ್ದೇನೆ. ನಾವು ಆ ಪತ್ರಿಕಾಲಯವನ್ನು ತೆರೆಸಬೇಕು ಎಂದು ಸಂಪೂರ್ಣವಾಗಿ ಪ್ರಯತ್ನ ಮಾಡಿದ್ದೇವೆ. ನಾಲ್ಕೈದು ಕನ್ಸಿಲಿಯೇಷನ್ ಮೀಟಿಂಗ್ ಮಾಡಿದ್ದೇವೆ. ಮಾಲೀಕರ ಪ್ರತಿನಿಧಿ, ಕಾರ್ಮಿಕರ ಪ್ರತಿನಿಧಿ, ಪತ್ರಕರ್ತರ ಪ್ರತಿನಿಧಿ, ಕಾರ್ಮಿಕ ಇಲಾಖೆಯ ಪ್ರತಿನಿಧಿ ಇವರನ್ನೆಲ್ಲಾ ಸೇರಿಸಿ ಒಂದು ಸಮಿತಿ ಮಾಡಿ ಹಾಬ್ಲಳ್ಳಿಗೆ ಕಳುಹಿಸಿ ಪತ್ರಿಕಾಲಯವನ್ನು ಮತ್ತೆ ತೆರೆಯುವ ಬಗ್ಗೆ ಪರಿಶೀಲನೆ ಮಾಡಿ ಎಂದು ಹೇಳಿದ್ದೇವೆ. ಹೊಣ ದುರುಪಯೋಗವಾಗಿರುವ ಬಗ್ಗೆ ಚಾರಿಟಿ ಕಮಿಷನರ್‌ರವರು ಹಿಂದಿದ್ದಂಥ ಟ್ರಸ್ಟಿ ಶ್ರೀ ಆರ್.ಆರ್. ದಿವಾಕರ್ ಅವರ ಮೇಲೆ ಕೇಸ್ ಹಾಕಿದ್ದಾರೆ. ಧಾರವಾಡ ಕೋರ್ಟಿನಲ್ಲಿ ಆ ಕೇಸ್ ನಡೆಯುತ್ತಿದೆ, ೨೮ನೇ ತಾರೀಖು ಹಿಯರಿಂಗ್ ಇದೆ. ಸರ್ಕಾರವೇ ಪತ್ರಿಕೆಯನ್ನು ನಡೆಸಬೇಕು ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಸರ್ಕಾರ ನಡೆಸುವುದಕ್ಕಾಗುವುದಿಲ್ಲ. ಸರ್ಕಾರ ಒಂದು ಪತ್ರಿಕೆಯನ್ನು ನಡೆಸಲೂಬಾರದು. ಸರ್ಕಾರ ಪತ್ರಿಕೆಯನ್ನು ನಡೆಸಿದರೆ ಪತ್ರಿಕೆಯ ಸಾರ್ವಭೌಮತ್ವ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಸರ್ಕಾರ ಪತ್ರಿಕೆಯನ್ನು ನಡೆಸಿದರೆ ಅದು ಸರ್ಕಾರಿ ಪತ್ರಿಕೆ ಆಗುತ್ತದೆಯೇ ವಿನಃ ಸಾರ್ವಜನಿಕರ ಪತ್ರಿಕೆಯಾಗುವುದಿಲ್ಲ. ಸರ್ಕಾರದ ತಪ್ಪುಒಪ್ಪುಗಳನ್ನು ಎತ್ತಿಹಿಡಿಯುತಕ್ಕ ಸ್ವತಂತ್ರವಾದ ಪತ್ರಿಕೆಯಾಗುವುದಿಲ್ಲ ಎಂದು ಅನೇಕ ಸಲ ಕಾನೂ ಹೇಳಿದ್ದೇನೆ. ಸಂಯುಕ್ತ ಕರ್ನಾಟಕ ಮಾಲೀಕರು ಬಸವರಾಜ್ ಇವರು ನಮ್ಮ ಪಕ್ಷದವರಲ್ಲ.ಮಾನ್ಯ ಬಸವಲಿಂಗಪ್ಪನವರ ಪಕ್ಷದವರು.ಶ್ರೀ ಬಸವರಾಜ್ ಅವರಿಗೂ ನಮ್ಮ ಪಕ್ಷಕ್ಕೂ ಯಾವುದೇ ವಿಧವಾದ ಸಂಬಂಧವಿಲ್ಲ. ಬಸವರಾಜರಾಗಲೀಯಾವ ರಾಜರೇ ಆಗಲಿ ಅವರ ಮೇಲೆ ಬಿಗಿಯಾದ ಕಾನೂನು ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಹಿಂಜರಿಯುವುದಿಲ್ಲ. ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುವುದಕ್ಕೆ ಹೋದಾಗ ಅಲ್ಲಿರತಕ್ಕ ಕಾರ್ಮಿಕರುತಮ್ಮ ಸೀನಿಯಾರಿಟಿ ಬಗ್ಗೆ ತೊಂದರೆಯಾಗುತ್ತದೆ, ಆದ್ದರಿಂದ ಈಗಲೇ ಈ ವಿಷಯವನ್ನು ಮುಗಿಸಬೇಡಿಎಂದು ಹೇಳಿ ಪ್ರಾವಿಡೆಂಟ್ ಫಂಡ್ ದುಡ್ಡು ಕೊಡಿಸುವುದಕ್ಕೆ ಪ್ರಯತ್ನ ಮಾಡಿಎಂದು ಹೇಳಿದರು. ನಂತರ ಪ್ರಾವಿಡೆಂಟ್ ಫಂಡ್ ಕಮೀಷನರ್ ಅವರನ್ನು ಕರೆಸಿ ಹಣ ಕೊಡುವ ವ್ಯವಸ್ಥೆ ಮಾಡಿದ್ದೇವೆ.ಏಕೆಂದರೆ ನೌಕರರ ನುಕ್ಕಳುತಾಲೆಗಳಿಗೆ ಸೇರಬೇಕಾಗುತ್ತದೆ ಅದಕ್ಕೆಲ್ಲಾ ಅವರಿಗೆ ತೊಂದರೆಯಾಗುತ್ತದೆ. ಎಂದು ಹಣಕೊಡಿಸಿದ್ದೇವೆ ಲೀಗಲ್ಲಾಗಿಕ್ರಮ ತೆಗೆದುಕೊಳ್ಳುವುದಕ್ಕೂ ನಾವು ಹಿಂಜರಿದಿಲ್ಲ. ಲೀಗಲ್ ಒಪೀನಿಯನ್ ತೆಗೆದುಕೊಂಡಿದ್ದೇವೆ ಅಡ್ವೋಕೇಟ್ ಜನರಲ್ ಕಾನೂನು ಕಾರ್ಯದರ್ಶಿ ಕಂದಾಯ ಇಲಾಖೆ ಕಾರ್ಯದರ್ಶಿ, ಮುಖ್ಯಕಾರ್ಯದರ್ಶಿ, ಎಲ್ಲರನ್ನೂ ಕರೆಸಿ ನಾಲ್ಕೈದು ಸಾರಿ ಚರ್ಚೆ ಮಾಡಿದ್ದೇವೆ. ಈಗ ಕೋರ್ಟಿನ ಮುಂದೆ ಈ ಪ್ರಶ್ನೆ ಇರುವುದರಿಂದ ಅದು ಮೊದಲು ಇತ್ಯರ್ಥವಾಗಬೇಕು, ನಾಳೆ ಏನಪ ಕೋರ್ಟಿನವರು ಒಂದು ತೀರ್ಮಾನ ಕೊಟ್ಟು ನಮ್ಮ ತೀರ್ಮಾನ ಒಂದು ತರಹ ಆದರೆ ತೊಂದರೆಯಾಗುತ್ತದೆ ಎಂಬ ಅಭಿಪ್ರಾಯ ಬಂತು. ಒಂದು ವೇಳೆ ಕೋರ್ಟಿನವರು ಟ್ರಸ್ಟಿ ದಿವಾಕರ್ ಅಲ್ಲ, ಬಸವರಾಜ್ ಅವರು ಎಂದಾಗಲೀತಥವಾ ಬಸವರಾಜ್ ಅವರಲ್ಲ ದಿವಾಕರ್ ಎಂದಾಗಲೀ ದಿವಾಕರ್‌ರವರು ಮಾಡಿರತಕ್ಕದ್ದು ಸರಿಯಲ್ಲ ಎಂದಾಗಲೀ ಬಸವರಾಜ್ ಅವರು ಮಾಡಿರುವುದು ಸರಿಯಿಲ್ಲವೆಂದಾಗಲೀ ಯಾವರೀತಿ ತೀರ್ಮಾನಕೊಡುತ್ತಾರೆ ಎಂಬುದನ್ನು ನೋಡಬೆ ಮುಂದಿನ ಕ್ರಮಕ್ಕೆ ಕೈ ಹಾಕಿದರೆ ತೊಂದರೆಯಾಗಬಹುದು. ಈಗ ಚಾರಿಟಿ ಕಮಿಷನ್ ಅವರು ಪತ್ರಿಕೆ ನಡೆಸುವುದಕ್ಕೆ ಅವಕಾಶ ಕೊಡಿ ಎಂದು ಧಾರವಾಡ ಕೋರ್ಟಿಗೆ ಅರ್ಜಿ ಹಾಕಿದ್ದಾರೆ. ಕೋರ್ಟಿನವರು ಅವಕಾಶ ಕೊಟ್ಟಿಲ್ಲ. ಸರ್ಕಾರದವರು ಪ್ರಭಾವ ಬೀರಿ ಎಂದರೆ ಹೇಗೆ? ಸರ್ಕಾರ ಪ್ರಭಾವ ಬೀರಿದರೆ ಅದು ಹೆಚ್ಚು ದೊಡ್ಡ ಪ್ರಭಾವವಾಯತೆಂದು ಹೇಳುತ್ತೀರಿ. ಹಾಗಾದರೆ ಯಾವರೀತಿ

ಪ್ರಭಾವ ಬೀರಬೇಕು? ಮಾನ್ಯ ಲಕ್ಷ್ಮೀಸಾಗರ್ ಅವರು ಅನೇಕ ಸಲಹೆಗಳನ್ನು ಕೊಟ್ಟಿದ್ದೇನೆ ಎಂದು ಹೇಳಿದರು. ಅವರ ಸಲಹೆ ಏನೂ ಇಲ್ಲ. ಸರ್ಕಾರದವರು ತೆಗದುಕೊಂಡು ನಡೆಸಿ ಎಂದು ಮಾನ್ಯ ಸದಸ್ಯರು ಹೇಳುವರೇನು? ಮತ್ತಿನ್ನೇನು ಸಲಹೆಯನ್ನು ಅವರು ಕೊಡುತ್ತಾರೆ?

ಶ್ರೀ ಎ. ಲಕ್ಷ್ಮೀಸಾಗರ್.—ವಾದಿಗಳು, ಪ್ರತಿವಾದಿಗಳು ಮತ್ತು ಇನ್ನೂ ಕೆಲವರು ಮುಚ್ಚಿರುವ ಮುದ್ರಣಾಲಯವನ್ನು ಪುನರಾರಂಭ ಮಾಡುವುದಕ್ಕೆ ಮಾನಸಿಕವಾಗಿ ಸಿದ್ಧರಾಗಿದ್ದಾರೆ. ಎಲ್ಲರೂ ಒಪ್ಪಿಕೊಂಡರೆ ನ್ಯಾಯಾಲಯದವರು ಅಡ್ಡಬರುವುದಿಲ್ಲವೆಂಬ ಅಭಿಪ್ರಾಯವನ್ನು ಮನಸ್ಸಿಲ್ಲಿಟ್ಟುಕೊಂಡು, ಅವರನ್ನೆಲ್ಲ ಒಂದು ಕಡೆ ಸೇರಿಸಿ, ಅವರ ಒಪ್ಪಿಗೆ ಪಡೆದು ಪತ್ರಿಕಾಲಯವನ್ನು ಪುನರಾರಂಭ ಮಾಡುವುದಕ್ಕೆ ಅವಕಾಶವಿದೆ. ಈ ಬಗ್ಗೆ ಪ್ರಯತ್ನ ಮಾಡಿ ನೋಡುವುದು ನನ್ನ ಬಹಳ ಮುಖ್ಯವಾದ ಸಲಹೆ. ಇದರ ಬಗ್ಗೆ ಮಾನ್ಯ ಸಚಿವರು ವಿವರಣೆ ಕೊಡಲಿಲ್ಲ.

ಶ್ರೀ ಸಿ.ಎಂ. ಇಬ್ರಾಹಿಂ.—ಅವರೆಲ್ಲರಿಗೂ ಮಾನಸಿಕ ಒಪ್ಪಿಗೆ ಇದೆ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಅವತ್ತಿನಿಂದ ಇವತ್ತಿನವರೆಗೆ ನಾನು ಅವರೊಡನೆ ಸಂಪರ್ಕವಿರಿಸಿಕೊಂಡಿದ್ದೇನೆ. ಈ ವಿಷಯದ ಬಗ್ಗೆ ಚರ್ಚೆ ಮಾಡುತ್ತಿದ್ದೇನೆ. ಆದರೆ, ಒಂದು ತೀರ್ಮಾನಕ್ಕೆ ಬರುವುದಕ್ಕೆ ಇನ್ನೂ ಸಾಧ್ಯವಾಗಿಲ್ಲ. ಇದು ನನ್ನ ಆಸ್ತಿ, ನನ್ನ ಕೈಗೆ ಕೊಡಿ ಎಂದುಎಲ್ಲರೂ ಹೇಳುತ್ತಿದ್ದಾರೆ. ಪತ್ರಿಕಾಲಯವನ್ನು ಪುನರಾರಂಭ ಮಾಡುವ ದೃಷ್ಟಿಯಿಂದ ಯಾರೂ ನೋಡುತ್ತಾ ಇಲ್ಲ. ಪತ್ರಿಕಾಲಯದ ಆಸ್ತಿಗಾಗಿ ಎಲ್ಲರೂ ಬಕಪಕ್ಷಿಗಳಂತೆ ಕಾಯುತ್ತಿದ್ದಾರೆ. ಪ್ರಮುಖರಲ್ಲಿ ಎರಡು ಗುಂಪಿರುವಂತೆ ಅಲ್ಲಿರುವ ಕೆಲಸಗಾರರಲ್ಲೂ ಎರಡು ಗುಂಪುಗಳಿವೆ. ಎರಡು ಗುಂಪಿನವರೂ ನಾವು ನಡೆಸುತ್ತೇವೆ, ನಮಗೆ ಆಸ್ತಿ ಕೊಡಿ ಎಂದು ಹೇಳುತ್ತಿದ್ದಾರೆ. ಶ್ರೀ ಬಸವರಾಜ್ ಅವರು, ಮುದ್ರಣಾಲಯವನ್ನು ಪುನರಾರಂಭ ಮಾಡುವುದಾದರೆ, ಮುದ್ರಣಾಲಯಕ್ಕೆ ಸಂಬಂಧಿಸಿದ ಎಲ್ಲ ಸ್ಥಿರಾಸ್ತಿಗಳನ್ನೂ ನನಗೆ ಕೊಡಿ, ನಾವೇ ಪುನರಾರಂಭ ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ, ಶ್ರೀ ದಿವಾಕರ್ ಅವರು, ಎಲ್ಲರಿಗಿಂತಲೂ ನಾನೊಬ್ಬನೇ ಸಾಚಾ, ನನಗೇ ಕೊಡಿ ಎಂದು ಹೇಳುತ್ತಿದ್ದಾರೆ. ಇದರಲ್ಲಿ ಕಳ್ಳರು ಯಾರು ಎನ್ನುವುದನ್ನು ತೀರ್ಮಾನ ಮಾಡುವುದಕ್ಕೆ ಸರ್ಕಾರಕ್ಕೆ ಸಾಧ್ಯವಿಲ್ಲ. ನ್ಯಾಯಾಲಯದಲ್ಲಿ ಮೊಕದ್ದಮೆ ಇರುವುದರಿಂದ ಇದನ್ನು ನ್ಯಾಯಾಲಯವೇ ತೀರ್ಮಾನ ಮಾಡಬೇಕು. ಪತ್ರಿಕಾಲಯವನ್ನು ಪುನರಾರಂಭ ಮಾಡಿ ಎಂದು ಸರ್ಕಾರ ಹೇಳಿದಾಯಿತು. ಪ್ರಭಾವಬೀರಿದ್ದೂ ಆಯಿತು. ಇಲ್ಲದಿದ್ದರೆ, ಕೇಸ್ ಹಾಕುತ್ತೇವೆಂತಲೂ ಹೇಳಿದ್ದಾಯಿತು. ಆದರೆ, ಅವರು ನೀವು ಏನು ಬೇಕಾದೂ ಮಾಡಿ ಆದಕ್ಕೆ ನಾವು ತಯಾರಾಗಿದ್ದೀವಿ ಎಂದರು. ಕೇಸ್ ಹಾಕಿ ಸೆಟ್ಲ್‌ಮೆಂಟ್ ಮಾಡಿಸಿದರೆ ಮತ್ತು ಪರಿಹಾರ ಕೊಡಿಸಿಬಿಟ್ಟರೆ ಈ ಪತ್ರಿಕಾಲಯದ ನಮ್ಮ ಸರ್ವಿಸ್ ಮುಗಿದುಹೋಗುತ್ತದೆ ಎಂದು ಅಲ್ಲಿನ ಕಾರ್ಮಿಕರು ಮೊರೆಹಾಕುತ್ತಿದ್ದಾರೆ. ಪರಿಹಾರವನ್ನು ಕೊಡಲಿಕ್ಕೆ ತಯಾರಾಗಿದ್ದರೂ, ಒಂದು ಸಲ ಕಾರ್ಮಿಕರಿಗೆ ಪರಿಹಾರ ಕೊಟ್ಟುಬಿಟ್ಟರೆ ಅವರ ವಿಷಯ ಅಲ್ಲಿಗೆ ಮುಗಿದಂತೆ. ಕಳೆದ ಎಂಟು-ಹತ್ತು ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ನೌಕರರ ಸರ್ವಿಸ್ ಮುಗಿದುಹೋಗುತ್ತದೆ. ಈ ಆಸ್ತಿಗೆ ಹಕ್ಕನ್ನು ನಾಲ್ಕು ಜನ ಕೇಳುತ್ತಿದ್ದಾರೆ. ನ್ಯಾಯಾಲಯದಲ್ಲಿರುವ ಈ ಮೊಕದ್ದಮೆ ಸಂಬಂಧವಾಗಿ ಇಂಟೇರಿಯಂ ಅರ್ಜಿಗಳು ಒಂದಾದ ಮೇಲೊಂದರಂತೆ ಬರುತ್ತಲೇ ಇವೆ. ಒಂದು ಕಡೆ ಹಿಯರಿಂಗ್ ಮುಗಿಯಿತೆಂದರೆ ಇನ್ನೊಂದು ಕಡೆ ಇಂಟೇರಿಯಂ ಅರ್ಜಿಯನ್ನು ತರುತ್ತಿದ್ದಾರೆ. ಅಲ್ಲದೆ ಶ್ರೀ ಬಸವರಾಜ್ ಅವರು ಮುದ್ರಣಾಲಯವನ್ನು ಪುನರಾರಂಭ ಮಾಡುವುದಕ್ಕೆ ಶ್ರೀ ಕುಂಭಕೋಣಂ ಅವರು ಒಪ್ಪುತ್ತಾ ಇಲ್ಲ, ಶ್ರೀ ಕುಂಭಕೋಣಂ ಅವರು ಪುನರಾರಂಭ ಮಾಡುವುದಕ್ಕೆ ಶ್ರೀ ದಿವಾಕರ್ ಅವರು ಒಪ್ಪುತ್ತಾ ಇಲ್ಲ. ಇದನ್ನೆಲ್ಲ ಮಾನ್ಯ ಬೊಮ್ಮಾಯಿ ಅವರು ಚೆನ್ನಾಗಿ ತಿಳಿದುಕೊಂಡಿದ್ದಾರೆ. ನಾನು ಇದನ್ನೆಲ್ಲಾ ಹೇಳಬಾರದೆಂದು ಸುಮ್ಮನಿದ್ದೆ. ಆದರೆ ಕೆಲವು ಸದಸ್ಯರು ಇದನ್ನೆಲ್ಲ ಬಹಿರಂಗವಾಗಿ ಹೇಳಲೇಬೇಕೆಂದು ಒತ್ತಾಯ ಮಾಡಿದ್ದರಿಂದ ನಾನು ಹೇಳುತ್ತಿದ್ದೇನೆ. ಶ್ರೀ ಬಸವರಾಜ್ ಅವರು ದೊಡ್ಡವರು ಅಥವಾ ಸಣ್ಣವರು ಎಂದು ನಾವೇನೂ ಮೀನ ಮೇಷ ಎಣಿಸುತ್ತಾ ಇಲ್ಲ. ಅವರು ಎಷ್ಟೇ ದೊಡ್ಡವರಾಗಿರಲಿ ಸರ್ಕಾರ ಕಾನೂನು ಪ್ರಕಾರ ಕ್ರಮ ಕೈಗೊಳ್ಳುತ್ತದೆ. ಇದು ನಾವು ಮಾಡಿದ ಪಾಪವಲ್ಲ. ಇದು ಹಿಂದಿನ ಸರ್ಕಾರ ಮಾಡಿದ ಪಾಪ ಲೋಕಶಿಕ್ಷಣ ಟ್ರಸ್ಟನ್ನು ಮಾರುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇ ದೊಡ್ಡ ಪಾಪ. ಆ ಪಾಪದ ಫಲವನ್ನು ಮುಗ್ಧ ಕಾರ್ಮಿಕರಿಂದು ಅನುಭವಿಸಬೇಕಾಗಿ ಬಂದಿದೆ. ಈ ವಿಚಾರ ನ್ಯಾಯಾಲಯದಲ್ಲಿರುವುದರಿಂದ ಪಾಪವನ್ನು ತೊಳೆಯುವುದಕ್ಕೆ ಸರ್ಕಾರಕ್ಕೆ ಸಾಧ್ಯವಿಲ್ಲ. ಚಾರಿಟಿ ಕಮಿಷನರನ್ನು ರೀಸಿವರ್ ಆಗಿ ನೇಮಿಸಲು ಅವಕಾಶ ಕೊಡಿ ಎಂದು ನ್ಯಾಯಾಲಯವನ್ನು ಕೇಳಲಾಗಿದೆ. ಅದರ ಮೇಲೆ ನ್ಯಾಯಾಲಯ ಏನು ತೀರ್ಮಾನ ತೆಗೆದುಕೊಳ್ಳುತ್ತದೋ ನೋಡೋಣ. ಅದರ ಮೇಲೆ ಮುಂದಿನ ಕ್ರಮ ಏನು ತೆಗೆದುಕೊಳ್ಳಬೇಕೆಂದು ವಿಚಾರಮಾಡೋಣ.

ಉಪಾಧ್ಯಕ್ಷರು.—ಇಲ್ಲಿಗೆ ಈ ವಿಚಾರ ಮುಗಿಯಿತು. ಇನ್ನು ಆಯವ್ಯಯದ ಮೇಲೆ ಸಾಮಾನ್ಯ ಚರ್ಚೆಯನ್ನು ಮುಂದುವರಿಸಲಾಗುವುದು. ಈಗ ಶ್ರೀ ಆರ್. ರಾಜೂಗೌಡ ಅವರು ಭಾಷಣ ಮಾಡುವರು.

Financial Business

General Discussion on the Budget for the Year 1980-81

† ಶ್ರೀ ಆರ್. ರಾಜುಗೌಡ (ಹಾನೂರು).—ಮಾನ್ಯ ಉಪಾಧ್ಯಕ್ಷರೇ, ೧೯೮೦-೮೧ನೇ ಸಾಲಿಗೆ ಮಾನ್ಯ ಅರ್ಥ ಸಚಿವರು ಮಂಡಿಸಿರುವ ಆಯವ್ಯಯ ಪತ್ರವನ್ನು ಅನುಮೋದಿಸುತ್ತಾ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಲಿಕ್ಕೆ ಇಚ್ಛಿಸುತ್ತೇನೆ. ಯಾವುದೇ ರಾಜ್ಯದ ಮುಂಗಡ ಪತ್ರ ಮತ್ತು ದರ ಅರ್ಥ ವ್ಯವಸ್ಥೆಯನ್ನು ಅವಲೋಕಿಸಿದಾಗ ಅದು ಪ್ರಗತಿದಾಯಕವಾಗಿರಬೇಕೆಯೆ ಅಥವಾ ಇಲ್ಲವೆ ಎಂಬುದನ್ನು ಹೇಳಬಹುದು. ಅರ್ಥ ವ್ಯವಸ್ಥೆಯು ಪ್ರಧಾನ ಅಂಗಗಳಾದ ಕೃಷಿ, ಕೈಗಾರಿಕೆ, ವಿದೇಶಿ ವ್ಯಾಪಾರ, ಸಾಗಾಣಿಕೆ ಸಂಪರ್ಕಸಾಧನಗಳು ಮತ್ತು ವಿದ್ಯುಚ್ಛಕ್ತಿ ಇವುಗಳು ನಿರೀಕ್ಷಿತ ರೀತಿಯಲ್ಲಿ ಪೃದ್ಧಿಸುತ್ತಾ ಹೋದಾಗ ಅದನ್ನು "ಪ್ರಗತಿದಾಯಕ" ವಾದುದೆಂದು ಹೇಳಬಹುದು. ಪ್ರತಿಯೊಂದು ಕ್ಷೇತ್ರದಲ್ಲೂ ನಿವ್ವಳ ಉತ್ಪಾದನೆ ನಿರೀಕ್ಷಿತ ಮಟ್ಟದಲ್ಲಿ ಮುಂದುವರಿಯುತ್ತಾ ಇರಬೇಕು. ಯಾವುದೇ ಕ್ಷೇತ್ರದಲ್ಲಿ ನಿವ್ವಳ ಆದಾಯ ನಿರೀಕ್ಷಿಸಿದ ಮಟ್ಟಕ್ಕೆ ಮುಟ್ಟದಿದ್ದರೆ ಅದು ರಾಷ್ಟ್ರೀಯ ಉದ್ಯೋಗದ ಮೇಲೆ ಮತ್ತು ರಾಷ್ಟ್ರೀಯ ಉತ್ಪನ್ನದ ವೃದ್ಧಿಯ ಮೇಲೆ ತೀವ್ರ ಪರಿಣಾಮವನ್ನುಂಟು ಮಾಡುತ್ತದೆ. ರಾಜ್ಯದ ಪ್ರತಿಯೊಂದು ಕ್ಷೇತ್ರದಲ್ಲೂ ಮತ್ತು ಪ್ರತಿಯೊಂದು ವರ್ಗದಲ್ಲೂ ಶೇಕಡ ಏಳೂವರೆಯಷ್ಟು ನಿವ್ವಳ ಉತ್ಪನ್ನ ಗಳಿಸುವ ಪ್ರಯತ್ನದಲ್ಲಿ ವಿಫಲವಾದಾಗ ಅದು ರಾಜ್ಯದ ಪ್ರಗತಿಗೆ ಕುಂಟಿತವಾಗುವುದು ನಿಶ್ಚಯ. ಅಭಿವೃದ್ಧಿಗೆ ಬೇಕಾದ ಎಲ್ಲ ಸೌಲಭ್ಯಗಳನ್ನೂ ಒದಗಿಸಿದ ಮಾತ್ರದಿಂದಲೆ ಅದು ನಿರಾಂತಕವಾಗಿ ಮತ್ತು ಸಂಯೋಜಿತವಾಗಿ ನಡೆಯುಬಲ್ಲದೆಂದು ಯಾರಾದರೂ ತಿಳಿದುಕೊಂಡಿದ್ದರೆ ಅದು ಮೂರ್ಖತನದ ಪರಮಾವಧಿ ಎಂದು ಹೇಳಬೇಕು. ಹಿಂದುಳಿದ ರಾಜ್ಯಗಳ ಪ್ರಗತಿಯನ್ನು ಸಾಧಿಸಬೇಕಾದರೆ ಅಧಿಕ ಪ್ರಯತ್ನದ ಅವಶ್ಯವಿದೆ. ಕೃಷಿ, ಕೈಗಾರಿಕೆ, ಮತ್ತು ವಿದೇಶಿ ವ್ಯಾಪಾರ ಇವು ಮೂರು ತಪ್ಪುಟಿಕೆಯು ಪಾದುಕೆಗಳಿದ್ದ ಹಾಗೆ. ಒಂದು ತಪ್ಪುಟಿಕೆಯ ಪಾದುಕೆ ಮುರಿದರೆ ಹೆಗೆ ಇಡಿ ತಪ್ಪುಟಿಕೆಯೇ ಬೀಳುತ್ತದೆ ಹಾಗೆಯೇ ಇವುಗಳಲ್ಲಿ ಯಾವುದಾದರೊಂದು ಅಂಗವನ್ನು ಕಡೆಗಣಿಸಿದರೆ ಅದು ಅಭಿವೃದ್ಧಿ ಮೇಲೆ ಪರಿಣಾಮ ಬೀರುತ್ತದೆಯಷ್ಟಲ್ಲದೆ ಅರ್ಥ ವ್ಯವಸ್ಥೆ ಸಹ ಕುಸಿದು ಬೀಳುತ್ತದೆ. ಯಾವುದೇ ಕ್ಷೇತ್ರದಲ್ಲಿ ನಿವ್ವಳ ಉತ್ಪನ್ನ ಕುಂಟಿತವಾದಾಗ ದೋಷವನ್ನು ಕಂಡುಹಿಡಿದು ಅದನ್ನು ನಿವಾರಣೆ ಮಾಡುವದಕ್ಕೆ ಪ್ರಯತ್ನವನ್ನು ಮುಂದುವರಿಸಿಕೊಂಡು ಹೋಗಬೇಕು. ಹಲವಾರು ಯೋಜನಾಕರ್ತರು ಅನೇಕ ಪಂಚವಾರ್ಷಿಕ ಯೋಜನೆಗಳನ್ನು ರೂಪಿಸಿದರೂ ಅದು ಈ ದೇಶದ ಬಡತನವನ್ನು ನೀಗುವುದರಲ್ಲಿ ಎಷ್ಟರಮಟ್ಟಿಗೆ ಯಶಸ್ವಿಯಾಗಿದೆ ಎನ್ನುವ ಬಗ್ಗೆ ಸಿಂಹಾವಲೋಕನ ಮಾಡಬೇಕಾಗಿದೆ. ಬಡತನ ಭಾರತ ದೇಶಕ್ಕೇ ಮೀಸಲಾಗಿಲ್ಲ, ಅದು ಜಗತ್ತಿನ ಎಲ್ಲ ರಾಷ್ಟ್ರಗಳಲ್ಲೂ ಇದೆ. ಆದರೆ ಬಡತನವೆನ್ನುವುದು ಅಲ್ಲಿಯ ಜನರ ಸರಾಸರಿ ಆದಾಯವನ್ನು ಆಧಾರವಿಟ್ಟು ನಿರ್ಧರಿಸಲ್ಪಡುತ್ತದೆ ಜಗತ್ತಿನ ಶ್ರೀಮಂತ ರಾಷ್ಟ್ರವಾದ ಅಮೇರಿಕದಲ್ಲಿ ಐದು ಜನರುಳ್ಳ ಒಂದು ಕುಟುಂಬದ ಸರಾಸರಿ ಆದಾಯ ಹಿಂಗಿಗೆ ನಾಲ್ಕೂವರೆ ಸಾವಿರ ರೂಪಾಯಿಗಳಿಗೆ ಕಮ್ಮಿ ಇದ್ದಾಗ ಅದು ಬಡ ಕುಟುಂಬವೆಂದು ಕರೆಯಲ್ಪಡುತ್ತದೆ. ಇಂತಹ ಬಡ ಕುಟುಂಬಗಳು ಅಲ್ಲಿ ಶೇಕಡ ಹತ್ತರಷ್ಟಿವೆ ಎಂದು ತಿಳಿದು ಬಂದಿದೆ, ಈ ಹೋಲಿಕೆಯಿಂದ ನಮ್ಮ ದೇಶದ ಬಡತನದ ಸ್ವರೂಪವನ್ನು ನೋಡಿದಾಗ ನಮ್ಮ ದೇಶ ಎಲ್ಲದರಲ್ಲೂ ಕೂಡ ಬಡ ದೇಶವಾಗಿರುವುದು ಕಂಡು ಬರುತ್ತದೆ. ಸ್ವತಂತ್ರಪೂರ್ವದಲ್ಲಿ ನಮ್ಮ ದೇಶ ಇನ್ನೂ ಹೆಚ್ಚು ಬಡತನದಲ್ಲಿತ್ತು. ಕಳೆದ ಮೂವತ್ತು ವರ್ಷಗಳಿಂದ ಅದು ಸ್ವಲ್ಪ ನಿವಾರಣೆಯಾಗಿದೆ ಎಂದು ಹೇಳಬಹುದು. ರಾಜ್ಯದ ಸಾಮಾಜಿಕ ಸೇವಾ ಸಂಸ್ಥೆಗಳು ಮತ್ತು ಧಾರ್ಮಿಕ ಸಂಸ್ಥೆಗಳು ದಾರಿದ್ರದಿತರ ಉದ್ಧಾರಕ್ಕಾಗಿ ಕೈಗೊಂಡಿರುವ ಅನೇಕ ಕಾರ್ಯಕ್ರಮಗಳ ದೃಷ್ಟಿಯಿಂದ ಪ್ರತಿ ವರ್ಷ ಬೆಚ್ಚ ಮಾಡತಕ್ಕ ಕೋಟ್ಯಾಂತರ ರೂಪಾಯಿಗಳನ್ನು ತೊಗಿ ನೋಡಿದಾಗ ಬಡತನ ನಿವಾರಣ ಕಾರ್ಯವು ನಿಜವಾಗಿ ಸಾಗಬೇಕಾದ ವೇಗದಲ್ಲಿ ಸಾಗುತ್ತಿಲ್ಲವೆಂದು ಘಂಟಾಘೋಷವಾಗಿ ಹೇಳುವುದಕ್ಕೆ ಸಾಧ್ಯವಿದೆ.